<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 218/2023**
**C/w 130/2026**

| ಸಾಕ್ಷಿಯ ಹೆಸರು | ಶ್ರೀ. ರವಿಕುಮಾರ್ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ರಾಮಯ್ಯ | 5 | 1 |
| ವಯಸ್ಸು | 52 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **18.03.2026.** | |
| ಉದ್ಯೋಗ | ಎ.ಎಸ್.ಐ., ಮಲ್ಲೇಶ್ವರಂ ಸಂಚಾರ ಠಾಣೆ | | |
| ವಾಸ ಸ್ಥಳ | ಮಹಾಲಕ್ಷ್ಮೀ ಲೇಔಟ್ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2017 ರಿಂದ 2022 ರವರೆಗೆ CCB Crime ವಿಭಾಗದಲ್ಲಿ ಹೆಚ್.ಸಿ.ಯಾಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 15.01.2021 ರಂದು ಸಂಜೆ 6.30 ಕ್ಕೆ CCB ಸಂಘಟಿತ ಅಪರಾಧ ದಳದ ಪಿ.ಐ. ಮುರುಗೇಂದ್ರಯ್ಯ ರವರು ಗಿರೀಶ್ ನಾಯಕ್ ಪಿ.ಐ., ನಾನು, ಸಿಬ್ಬಂದಿಗಳಾದ ಹೆಚ್.ಸಿ. ಅರುಣ್ ಕುಮಾರ್, ಹೆಚ್.ಸಿ. ನರಸಿಂಹಮೂರ್ತಿ, ಹೆಚ್.ಸಿ. ಯೋಗಾನಂದ್, ಹೆಚ್.ಸಿ. ಗೋಪಾಲ್, ಹೆಚ್.ಸಿ. ಹರೀಶ್ ರವರನ್ನು ಮತ್ತು ಪಂಚರಾದ ಕೌಶಿಕ್ ಮತ್ತು ಕಾರ್ತಿಕ್ ರವರನ್ನು ಕಛೇರಿಗೆ ಬರಮಾಡಿಕೊಂಡು ಬ್ಯಾಡರಹಳ್ಳಿ ಠಾಣೆಯ ಅಂಜನಾ ನಗರ ಸಮೀಪ ವಿರುವ ಮಾಗಡಿ ರಸ್ತೆಯಿಂದ ವಿಶ್ವೇವರಯ್ಯ ಲೇಔಟ್ ನಲ್ಲಿ ಯಾರೋ 4 – 5 ಕೈಗಳಲ್ಲಿ ಮಾರಾಕಾಸ್ತ್ರಗಳನ್ನು ಹಿಡಿದುಕೊಂಡು ಪಿಸು ಪಿಸು ಎಂದು ಮಾತನಾಡಿಕೊಳ್ಳುತ್ತಿದ್ದು ಹಾಗೂ ಅವರ ಚಲನ ವಲನ ಗಮನಿಸಿದಾಗ ಸಾರ್ವಜನಿಕರಿಂದ ಹಣ ಮತ್ತು ಒಡವೆಗಳನ್ನು ದರೋಡೆ ಮತ್ತು ಸುಲಿಗೆ ಮಾಡಲು ಸಜ್ಜಾಗಿದ್ದಾರೆ ಎಂದು ಕಂಡು ಬಂತು.

2. ನಾವು ಸುತ್ತು ವರಿದು 4 ಆಸಾಮಿಗಳನ್ನು ಹಿಡಿದುಕೊಂಡೆವು. ಪಿ.ಐ. ಮುರುಗೇಂದ್ರಯ್ಯ ರವರು ವಾಸು ರವರನ್ನು ಹಿಡಿದುಕೊಂಡಿದ್ದು ಹಾಗೂ ಅವರ ಬಳಿ 22.5 ಇಂಚು ಉದ್ದ ಹಾಗೂ 4 ಇಂಚು ಅಗಲವಿರುವ ಒಂದು ಲಾಂಗ್ ಇತ್ತು, ಪಿ.ಐ. ಗಿರೀಶ್ ರವರು ವಿಕಾಸ್ ರವರನ್ನು ಹಿಡಿದುಕೊಂಡಿದ್ದು ಹಾಗೂ ಅವರ ಬಳಿ 27 ಇಂಚು ಉದ್ದ ಹಾಗೂ 2.5 ಇಂಚು ಅಗಲವಿರುವ ಒಂದು ಲಾಂಗ್ ಇತ್ತು, ನಾನು ಚಂದ್ರಶೇಖರ್ ರವರನ್ನು ಹಿಡಿದುಕೊಂಡಿದ್ದು ಹಾಗೂ ಅವರ ಬಳಿ 30 ಇಂಚು ಉದ್ದ ಹಾಗೂ 4 ಇಂಚು ಸುತ್ತಳತೆ ಇರುವ ಒಂದು ಮರದ ದೊಣ್ಣೆ ಇತ್ತು, ಅರುಣ್ ರವರು ಮಹೇಶ್ ರವರನ್ನು

ಹಿಡಿದುಕೊಂಡಿದ್ದು ಹಾಗೂ ಅವರ ಬಳಿ 24.5 ಇಂಚು ಉದ್ದ ಹಾಗೂ 4 ಇಂಚು ಸುತ್ತಳತೆ ಇರುವ ಒಂದು ಮರದ ದೊಣ್ಣೆ ಮತ್ತು ಖಾರದ ಪುಡಿ ಇತ್ತು. ಓಡಿ ಹೋದವರ ಹೆಸರು ಲೋಕೇಶ್ ಎಂದು ತಿಳಿದು ಬಂತು. ವಶಪಡಿಸಿಕೊಂಡ ವಸ್ತುಗಳನ್ನು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ OCW ಎಂದು ಸೀಲ್ ಮಾಡಿ ಪಂಚರ ಸಮಕ್ಷಮ ಮಹಜರ್ ಮಾಡಿ ಜಪ್ತಿ ಪಡಿಸಲಾಯಿತು. ಪಂಚರ ಹಾಗೂ ಪಿ.ಐ. ಮುರುಗೇಂದ್ರಯ್ಯ ರವರ ಸಹಿಗಳನ್ನು ಒಂದು ಚೀಟಿಯಲ್ಲಿ ಮು.ಮಾ. ಗಳ ಅಂಟಿಸಿದ್ದೇವೆ. ಮಹಜರ್ ಗೆ ನಾನು ಸಹಿ ಮಾಡಿದ್ದು ಅದನ್ನು ಮು.ಮಾ. 1 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 1 (ಎ) ಎಂದು ಗುರುತಿಸಲಾಯಿತು. ನಂತರ ಜಪ್ತಿ ಮಾಡಿದ ಮಾಲು ಮತ್ತು ಆರೋಪಿತರೊಂದಿಗೆ ಠಾಣೆಗೆ ವಾಪಸ್ಸು ಬಂದಿರುತ್ತೇವೆ. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ. ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ್ದ ಎರಡು ಲಾಂಗ್, ಎರಡು ದೊಣ್ಣೆ ಮತ್ತು ಖಾರದ ಪುಡಿ ಪೊಟ್ಟಣವನ್ನು ಮು.ಮಾ. 1 ರಿಂದ 5 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ 1 ಮತ್ತ 2 ನೇ ಆರೋಪಿತರ ಪರ ಶ್ರೀ. **MU** ವಕೀಲರಿಂದ :</u>

1. ಬಾತ್ಮಿ ಬಂದಾಗ ನಾನು ಕಛೇರಿಯಲ್ಲಿ ಇದ್ದೆ. ಫೋನ್ ಮೂಲಕ ನಮ್ಮ ಮೇಲಾಧಿಕಾರಿಗೆ ಮಾಹಿತಿ ಬಂತು. ಪಂಚ ಸಾಕ್ಷಿದಾರರನ್ನು ಯಾರು ಎಲ್ಲಿಂದ ಕರೆದುಕೊಂಡು ಬಂದರು ಎಂದು ಗೊತ್ತಿಲ್ಲ. ನಮ್ಮ ಕಛೇರಿಯಿಂದ ಘಟನ ಸ್ಥಳ 9 ಕಿ.ಮಿ. ದೂರ ಇದೆ. ಘಟನಾ ಸ್ಥಳವು ಬ್ಯಾಡರಹಳ್ಳಿ ಠಾಣೆಗೆ ಹತ್ತಿರ ಇದೆ. ನಮ್ಮ ಕಛೇರಿಯಿಂದ ಘಟನಾ ಸ್ಥಳಕ್ಕೆ 45 ನಿಮಿಷ ಸಮಯ ಹಿಡಿಯುತ್ತದೆ. ಬ್ಯಾಡರಹಳ್ಳಿ ಠಾಣೆಗೆ ಮಾಹಿತಿ ಕೊಡಬಹುದಿತ್ತು ಆದರೆ ಕೊಡಲಿಲ್ಲ. ನಾವು ಹೋದ ಖಾಸಗಿ ಹಾಗೂ ಸರ್ಕಾರಿ ವಾಹನದ ಸಂಖ್ಯೆ ಗೊತ್ತಿಲ್ಲ. ನಾವು ಎರಡು ವಾಹನದಲ್ಲಿ 10 ಜನ ಹೋದೆವು. ನಾವು ಸುಮಾರು 100 ಮೀಟರ್ ದೂರದಲ್ಲಿ ನಿಂತು ನೋಡಿದೆವು. ಪಿಸು ಮಾಸು ಆಡುವುದು 100 ಅಡಿ ದೂರದಲ್ಲಿ ಕೇಳಿಸುವುದಿಲ್ಲ ಎಂದರೆ ಸರಿ ಅಲ್ಲ. ನಾನು ಆ ದಿನ ಕರ್ತವ್ಯದಲ್ಲಿ ಇರಲಿಲ್ಲ, ಸ್ಥಳಕ್ಕೆ ಹೋಗಿಲ್ಲ, ಆರೋಪಿತರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ ಅಲ್ಲ. ಮಹಜರ್ ಅನ್ನು ಯಾರು ಟೈಪ್ ಮಾಡಿದರು ಎಂದು ಹೇಳಿಲ್ಲ. ಮನೆಯಲ್ಲಿ ಇದ್ದ ಆರೋಪಿತರನ್ನು ಕರೆ ತಂದು ಅಂಕಿ ಅಂಶಕ್ಕಾಗಿ ಈ ಪ್ರಕರಣಕ್ಕೆ ಸೇರಿಸಿದ್ದೇವೆ ಎಂದರೆ ಸರಿ ಅಲ್ಲ. ಸುಮಾನ್ಯವಾಗಿ ಮು.ಮಾ. ಗಳ ರೀತಿ ವಸ್ತುಗಳು ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಮು.ಮಾ.ಗಳನ್ನು ನಾನೇ ಖರೀದಿ ಮಾಡಿಕೊಂಡು ಬಂದಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು

ಯಾರು ದಸ್ತಗಿರಿ ಮಾಡಿಲ್ಲ ಎಂದರೆ ಸರಿ ಅಲ್ಲ. ನಾವು ಎರಡು ವಾಹನಗಳಲ್ಲಿ ಆರೋಪಿತರನ್ನು ಕರೆ ತಂದೆವು. ಆ ವಾಹನಗಳಲ್ಲಿ ಆರೋಪಿತರನ್ನು ಕೂರಿಸಿಕೊಂಡು ಹೋದೆವು. ಆ ವಾಹನಗಳು ತುಂಬಿಹೋಗಿತ್ತು ಎಂದು ಹೇಳಿದ್ದು ಆ ಕಾರಣದಿಂದ ಆರೋಪಿತರನ್ನು ಆ ವಾಹನದಲ್ಲಿ ಕರೆದುಕೊಂಡು ಬರಲು ಸಾಧ್ಯ ಇಲ್ಲ ಎಂದರೆ ಸರಿ ಅಲ್ಲ. ಅಕ್ಕ ಪಕ್ಕದ ಮನೆಯುವರನ್ನು ಸಾಕ್ಷಿಯನ್ನಾಗಿ ಮಾಡಿಲ್ಲ. ಮೇಲಾಧಿಕಾರಿಗಳ ಒತ್ತಾಯ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ 5 ನೇ ಆರೋಪಿತರ ಪರ ಶ್ರೀ. **HK** ವಕೀಲರಿಂದ :

2. ಆ ಏರಿಯಾದಲ್ಲಿ ಯಾವುದೇ ಬೀದಿ ದೀಪಗಳು ಇರಲಿಲ್ಲ ಎಂದರೆ ಸರಿ. ಬೀದಿ ದೀಪಗಳು ಇಲ್ಲದ ಕಾರಣ ಹಾಗೂ ಕತ್ತಲಾಗಿದ್ದ ಕಾರಣದಿಂದ ಅಲ್ಲಿ ಯಾರು ಇದ್ದರೂ ಮತ್ತು ಓಡಿ ಹೋದರು ಎಂದು ತಿಳಿದಿಲ್ಲ ಎಂದರೆ ಸರಿ ಅಲ್ಲ. ಈ ರೀತಿ ಅಪರಾಧಕ್ಕೆ 5 ಜನರು ಬೇಕಾಗಿದ್ದು ಯಾರು ಓಡಿ ಹೋಗದೇ ಇದ್ದರೂ ಸುಳ್ಳು ಹೇಳಿದ್ದೇನೆ ಎಂದರೆ ಸರಿ ಅಲ್ಲ. ಅದೇ ಮೊದಲ ಬಾರಿಗೆ 5 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದೆರ ಸರಿ ಅಲ್ಲ. ನಿಶಾನೆ.ಪಿ. 1 ಅನ್ನು ಸ್ಥಳದಲ್ಲಿ ಮಾಡಿಲ್ಲ ಮತ್ತು ಠಾಣೆಯಲ್ಲಿ ಮಾಡಿದ್ದಾರೆ ಎಂದರೆ ಸರಿ ಅಲ್ಲ. ಉಳಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.